ದಿಃ **27.01.2024** ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಿಶೇಷ ಅಭಿಯೋಜಕರಿಂದ

ವೈಧ್ಯರು ನೀಡಿದ ಔಷಧಿ ಚೀಟಿ / ಪ್ರಿಸ್ಕ್ರಿಪಷನಲ್ಲಿ ಆ ವೈಧ್ಯರ ಹೆಸರು ಮತ್ತು ಅವರ ರಿಜಿಸ್ಟ್ರೇಷನ್ ನಂಬರ್ ನಮೂದಿಸಬೇಕು ಎನ್ನುವುದು ನಿಜ. ಸಾಕ್ಷಿ ಈಗ್ಗೆ ಐದು ವರ್ಷಗಳಿಂದ ಆ ನಿಯಮ ಬಂದಿದೆ ಎನ್ನುತ್ತಾರೆ. ವೈಧ್ಯರ ಹೆಸರು ಮತ್ತು ಅವರ ರಿಜಿಸ್ಟ್ರೇಷನ್ ನಂಬರ್ ಇರದೆ ಹೋದ ಪಕ್ಷದಲ್ಲಿ ಆ ವೈಧ್ಯರ ಸೀಲ್ ಅನ್ನು ಆ ಚೀಟಿಯ ಮೇಲೆ ಹಾಕಬೇಕು ಎನ್ನುವುದು ನಿಜ. ಆ ಸೀಲಿನಲ್ಲಿ ವೈಧ್ಯರ ಹೆಸರು ಮತ್ತು ಅವರ ರಿಜಿಸ್ಟ್ರೇಷನ್ ನಂಬರ್ ಇರುತ್ತದೆ ಎನ್ನುವುದು ನಿಜ. ನಿಡಿ 21 ರಲ್ಲಿ ಪ್ರಿಸ್ಕ್ರಿಪಷನ್ ರಸೀದಿಯಲ್ಲಿ ವೈಧ್ಯರ ಹೆಸರು, ರಿಜಿಸ್ಟ್ರೇಷನ್ ನಂಬರ್ ಅಥವಾ ಸೀಲ್ ಇರುವುದಿಲ್ಲ ಎನ್ನುವುದು ನಿಜ. ನಿಡಿ 21 ರಲ್ಲಿ ಲಕ್ಷ್ಮೀ ಹಾಸ್ಪಿಟಲ್ ಎಂದು ಬರೆದಿದೆ ಆದರೆ ಅದರಲ್ಲಿ ಆಸ್ಪತ್ರೆಯ ರಿಜಿಸ್ಟ್ರೇಷನ್ ನಂಬರ್ ಇಲ್ಲ ಎನ್ನುವುದು ನಿಜ. ದಿನಾಂಕಃ **06.01.2011** ರಂದು ನಾನು ಮೃತ ವೀಣಾಳನ್ನು ಪರೀಕ್ಷೆ ಮಾಡಿರುವುದಿಲ್ಲ ಆದರೂ ಕೂಡ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಡಿ 21 ದಾಖಲೆಯನ್ನು ಸೃಷ್ಟಿ ಮಾಡಿಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ದಿಃ **23.06.2011** ರಂದು ಲಕ್ಷ್ಮೀ ಆಸ್ಪತ್ರೆಯಲ್ಲಿ ನಾನು ಮೃತ ವೀಣಾಳನ್ನು ಪರೀಕ್ಷೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಡಿಡಬ್ಲ್ಯೂ 2 ಡಾಃ ಶ್ರೀರಾಮ್ ಮತ್ತು ನಾನು ಸೇರಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ದಾಖಲೆಗಳನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಲಕ್ಷ್ಮೀ ಆಸ್ಪತ್ರೆಯಲ್ಲಿ ಕನ್ಸಲ್ಟಂಟ್ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ನೀಡಿಲ್ಲ ಎನ್ನುವುದು ನಿಜ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

(ಬಿ.ಪಿ.ದೇವಮಾನೆ)

C/c 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ.

**ಸಾಕ್ಷಿದಾರರ_ಸಹಿಃ_**